## ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಸಿ.ಜೆ.ಎಂ ರವರ ನ್ಯಾಯಾಲಯ, ಚಾಮರಾಜನಗರ.

## ಸಿ. ಸಿ. ನಂಬರ್ಃ 85-5024

ಪಿರ್ಯಾದುದಾರರು : **ರಾಜ್ಯದ ಪರವಾಗಿ ಸಂಚಾರ ಪೊಲೀಸ್ ಠಾಣೆ,**
ಚಾಮರಾಜನಗರ.

ಆರೋಪಿತರು : 1. **ಮಾದೇಶ**
ಲೇಟ್ ಚೆನ್ನಂಜೇಗೌಡ
48 ವರ್ಷ,
ವಾಸಃ ತಾಳವಾಡಿ ಟೌನ್,
ಸತ್ಯಮಂಗಲ ತಾಲ್ಲೂಕು,
ಈರೋಡು ಜಿಲ್ಲೆ,
ತಮಿಳುನಾಡು ರಾಜ್ಯ.

2. **ಸಿದ್ದರಾಜು**
ಬಿನ್ ಚೆನ್ನಂಜೇಗೌಡ
37 ವರ್ಷ
ವಾಸಃ ಕುಳ್ಳೂರು ಗ್ರಾಮ,
ಮೂಕನಪಾಳ್ಯ ಅಂಚೆ,
ಚಾಮರಾಜನಗರ ತಾಲ್ಲೂಕು ಮತ್ತು ಜಿಲ್ಲೆ.

### ಆರೋಪಣೆ

ಶ್ರೀ. ಪ್ರಕಾಶ್ ಸಿ.ಡಿ, ಹಿರಿಯ ಸಿವಿಲ್ ನ್ಯಾಯಾದೀಶರು ಮತ್ತು ಮುಖ್ಯ ನ್ಯಾಯಿಕ ದಂಡಾಧಿಕಾರಿ, ಚಾಮರಾಜನಗರ ಆದ ನಾನು ನಿಮ್ಮ ಮೇಲೆ ಆರೋಪಿಸುವುದೇನೆಂದರೆ,

**ದಿನಾಂಕ: 05.12.2023** ರಂದು ರಾತ್ರಿ ಸುಮಾರು 8.00 ರ ಸಮಯದಲ್ಲಿ ಚಾಮರಾಜನಗರ ಸಂಚಾರ ಪೊಲೀಸ್ ಠಾಣಾ ಸರಹದ್ದು, ಬದನಗುಪ್ಪೆ ಗ್ರಾಮದ ವಾಸಿ ಪುಟ್ಟಸ್ವಾಮಿ ರವರು ಚಾಮರಾಜನಗರ – ಸಂತೇಮರಹಳ್ಳಿ ಮುಖ್ಯ ರಸ್ತೆಯ ದೊಡ್ಡರಾಯಪೇಟೆ ಗೇಟ್ ಹತ್ತಿರ

ಬಸ್ಸಿಗೆ ಹೋಗಲು ರಸ್ತೆಯನ್ನು ಕ್ರಾಸ್ ಮಾಡುವಾಗ, ಆ ಸಮಯದಲ್ಲಿ 1ನೇ ಆರೋಪಿಯಾದ ನೀವು ಕೆ.ಎ 10 ವೈ 4269 ರ ಹಿರೋ ಸ್ಪೈಂಡರ್ ಪ್ಲಸ್ ಮೋಟಾರ್ ಸೈಕಲ್‌ನಲ್ಲಿ ಸಾಕ್ಷಿ –02 ರವರನ್ನು ಕೂರಿಸಿಕೊಂಡು ಸಂತೇಮರಳ್ಳಿ ಮಾರ್ಗದಿಂದ ಚಾಮರಾಜನಗರ ಕಡೆಗೆ ಅತೀವೇಗವಾಗಿ, ಅಜಾಗರೂಕತೆಯಿಂದ ಬೈಕ್ ಚಾಲನೆಮಾಡಿ ನಿಯಂತ್ರಣ ತಪ್ಪಿ ರಸ್ತೆ ದಾಟುತ್ತಿದ್ದ ಪುಟ್ಟಸ್ವಾಮಿಯವರಿಗೆ ಡಿಕ್ಕಿ ಪಡಿಸಿದ್ದು, ಆ ಮೂಲಕ **ಭಾರತೀಯ ದಂಡ ಸಂಹಿತೆ ಕಲಂ 279** ರಡಿಯಲ್ಲಿ ಅಪರಾಧವನ್ನು ಎಸಗಿರುತ್ತೀರಿ ಎಂದು ಮತ್ತು ಸದರಿ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆದೊಳಗೆ ಮಾಡಿರುತ್ತೀರಿ ಎಂದು ಆರೋಪಿಸುತ್ತೇನೆ.

**ಎರಡನೇಯದಾಗಿ** ಅದೇ ದಿನ, ಸ್ಥಳ ಮತ್ತು ಸಮಯದಂದು, 1ನೇ ಆರೋಪಿಯಾದ ನೀವು ಕೆ.ಎ 10 ವೈ 4269 ರ ಹಿರೋ ಸ್ಪೈಂಡರ್ ಪ್ಲಸ್ ಮೋಟಾರ್ ಸೈಕಲ್ ಅನ್ನು ಅತಿವೇಗವಾಗಿ ಅಜಾಗರುಾಕತೆಯಿಂದ ಚಾಲನೆ ಮಾಡಿಕೊಂಡು ಬಂದು ಪುಟ್ಟಸ್ವಾಮಿ ರವರಿಗೆ ಡಿಕ್ಕಿ ಪಡಿಸಿದ ಪರಿಣಾಮ, ಸದರಿ ಪುಟ್ಟಸ್ವಾಮಿ ರವರ ಎಡದ ಕಾಲಿನ ಮಂಡಿಗೆ ಹಾಗೂ ಎಡದ ಕೈಗೆ ತೀವ್ರತರವಾದ ಗಾಯಗಳಾಗಿದ್ದು, ನಂತರ ಚಾಮರಾಜನಗರ ಜಿಲ್ಲಾಸ್ಪತ್ರೆಗೆ ದಾಖಲಿಸಿದ ಪ್ರಥಮ ಚಿಕಿತ್ಸೆ ಕೊಡಿಸಿ ವೈದ್ಯರ ಸಲಹೆ ಮೇರೆಗೆ ಹೆಚ್ಚಿನ ಚಿಕಿತ್ಸೆ ಸಂಬಂಧ ಮೈಸೂರು ಕೆ.ಆರ್ ಆಸ್ಪತ್ರೆಯಗೆ ದಾಖಲಿಸಿ ಚಿಕಿತ್ಸೆ ಕೊಡಿಸುತ್ತಿದ್ದಾಗ, ದಿನಾಂಕ:02.01.2024 ರ ಬೆಳಿಗ್ಗೆ 03.54 ಗಂಟೆಯ ಸಮಯದಲ್ಲಿ ಚಿಕಿತ್ಸೆ ಫಲಕಾರಿಯಾಗದೆ ಮೃತಪಟ್ಟಿದ್ದು, ಆ ಮೂಲಕ **ಭಾರತೀಯ ದಂಡ ಸಂಹಿತೆ ಕಲಂ 304(ಎ)** ರಡಿಯಲ್ಲಿ ಅಪರಾಧವನ್ನು ಎಸಗಿರುತ್ತೀರಿ ಎಂದು ಮತ್ತು ಸದರಿ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆದೊಳಗೆ ಮಾಡಿರುತ್ತೀರಿ ಎಂದು ಆರೋಪಿಸುತ್ತೇನೆ.

**ಕೊನೆಯದಾಗಿ** ಅದೇ ದಿನ, ಸ್ಥಳ ಮತ್ತು ಸಮಯದಂದು, 2ನೇ ಆರೋಪಿಯಾದ ನೀವು ಕೆ.ಎ 10 ವೈ 4269 ರ ಹಿರೋ ಸ್ಪೈಂಡರ್ ಪ್ಲಸ್ ಮೋಟಾರ್ ಸೈಕಲ್‌ಗೆ ವಿಮೆ ಇಲ್ಲದೇ ಇದ್ದರು, 1ನೇ ಆರೋಪಿಗೆ ಮೋಟರ್ ಸೈಕಲ್ ನ್ನು ಚಾಲನೆ ಮಾಡಲು ನೀಡಿದ್ದು, ಆ ಮೂಲಕ **ಭಾರತೀಯ ಮೋಟಾರು ವಾಹನ ಕಾಯ್ದೆ ಕಲಂ 146 ಸಹವಾಚಕ 196** ರಡಿಯಲ್ಲಿ ಅಪರಾಧವನ್ನು ಎಸಗಿರುತ್ತೀರಿ ಎಂದು ಮತ್ತು ಸದರಿ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆದೊಳಗೆ ಮಾಡಿರುತ್ತೀರಿ ಎಂದು ಆರೋಪಿಸುತ್ತೇನೆ.

ಮೇಲಿನ ಆರೋಪಣೆಯನ್ನು ಆರೋಪಿತರಿಗೆ ಓದಿ ವಿವರಿಸಲಾಗಿ, ಅವರು ಅರ್ಥಮಾಡಿಕೊಂಡು ನೀಡಲಾದ ಉತ್ತರಗಳನ್ನು ನಾನು ನನ್ನ ಸ್ವ-ಹಸ್ತಾಕ್ಷರದಲ್ಲಿ ದಾಖಲು ಮಾಡಿಕೊಂಡಿರುತ್ತೇನೆಂದು ದೃಢಿಕರಿಸಿರುತ್ತೇನೆ.

ಪ್ರಶ್ನೆ : 1 : ನಿಮಗೆ ಓದಿ ಹೇಳಿದುದು ಅರ್ಥವಾಯಿತೇ ?

ಆರೋಪಿತರ ಉತ್ತರ :

ಪ್ರಶ್ನೆ : 2 : ತಪ್ಪು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆ ಬಯಸುವಿರೋ ?

ಆರೋಪಿತರ ಉತ್ತರ :

ದಿನಾಂಕ : 24.07.2025

**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಸಿ.ಜೆ.ಎಂ,**
**ಚಾಮರಾಜನಗರ.**

ಆರೋಪಿತರ ಸಹಿ.